doc-523
T.P-2

Reg No B G 155 8 — 8 —72

55th Year of Publication ‘Satyavadi’ daily, Mysore 4

In the State - The First
Golden Jubilee Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಆಚರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅಕ್ಕಿಗಾಗಿ ಕೇಂದ್ರಕ್ಕೆ ಮೈಸೂರಿನ ವಿನಂತಿ

ಕಾರ್ಪೊರೇಷನ್ನಿಗೆ ಎಚ್ಚರಿಕೆ

ಬೆಂಗಳೂರು— ನಗರದ ಕಾರ್ಪೊರೇಷನ್ ಸರಕಾರ ಕೊಟ್ಟ ಸೂಚನೆಯಂತೆ ತೆರಿಗೆ ಪುನರ್ವಿಮರ್ಶೆ ನಿಲ್ಲಿಸಿದ್ದರೆ ಅದರ ಮೇಲೆ ಕ್ರಮಕೈಗೊಳ್ಳಲಾಗುವುದೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

ಅನಾವೃಷ್ಟಿ ಪರಿಹಾರ

ಬೆಂಗಳೂರು— ರಾಜ್ಯದಲ್ಲಿ ಅನಾವೃಷ್ಟಿ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರದಿಂದ ರೂ 13 ಕೋಟಿ ಒಟ್ಟು ಸಹಾಯ ಕೇಳಲಾಗಿದೆಯೆಂದು ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಹೇಳಿದರು.

★

ದೀಪಾಲಂಕಾರದಲ್ಲಿ ಮಿತವ್ಯಯ

ನವದೆಹಲಿ— ದೇಶದಲ್ಲಿ ಅನಾವೃಷ್ಟಿ ಮತ್ತು ವಿದ್ಯುಚ್ಛಕ್ತಿ ಕಡಮೆ ಇರುವುದರಿಂದ ಸ್ವಾತಂತ್ರ್ಯ ರಜತೋತ್ಸವದಂದು ದೀಪಾಲಂಕಾರದಲ್ಲಿ ಮಿತವ್ಯಯ ಇರಲೆಂದು ಪ್ರಧಾನಿಯವರು ರಾಜ್ಯಗಳ ಮತ್ತು ಕೇಂದ್ರ ಪ್ರದೇಶಗಳ ಸರಕಾರಕ್ಕೆ ಸೂಚಿಸಿದಾರೆ

ಉಪಾಧ್ಯಕ್ಷತೆ

ಬೆಂಗಳೂರು— ವಿಧಾನ ಪರಿಷತ್ತಿನ ವಿರೋಧ ನಾಯಕ ಶ್ರೀ ಟಿ. ನರಸಿಂಹ ಮೂರ್ತಿಯವರು ವಿಧಾನ ಪರಿಷತ್ತಿನ ಉಪಾಧ್ಯಕ್ಷರಾಗಿ ಆಯ್ಕೆಯಾದರು.

★

ಕೇಂದ್ರದಿಂದ ಅಕ್ಕಿ ಕೇಳಿಕೆ

ಬೆಂಗಳೂರು— ರಾಜ್ಯ ಸರಕಾರವು ಕೇಂದ್ರವನ್ನು 15000 ಟನ್ ಅಕ್ಕಿ ವಿನಂತಿಸಿದ್ದು, ಈ ಬಗ್ಗೆ ಕೇಂದ್ರವು ಪರ್ಯಾಲೋಚಿಸುತ್ತಿರುವುದೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

○

ಕರ್ನಾಟಕ

ಬೆಂಗಳೂರು — ರಾಜ್ಯಕ್ಕೆ “ಕರ್ನಾಟಕ” ವೆಂದು ಪುನರ್ನಾಮಕರಣದ ಠರಾವು ವಿಧಾನ ಪರಿಷತ್ತಿನಲ್ಲಿ ಸರ್ವಾನುಮತದಿಂ ಮಂಜೂರಾಯಿತು.

★

ಜಾಕ್‌ಪಾಟ್ ಹಣ 349 ಮಂದಿಗೆ

ಪೂನಾ— ಶನಿವಾರದ ರೇಸಿನ್‌ನಲ್ಲಿ ಜಾಕ್‌ಪಾಟ್ ಹಣ 349 ಟಿಕೀಟುಗಳಿಗೆ ತಲಾ ರೂ 401 ಸಿಕ್ಕಿತು.

ಬಂಗ್ಲಾದೇಶಕ್ಕೆ ಅಪಾರ ಚಿನ್ನ

ನವದೆಹಲಿ— ಕಳೆದ ವರ್ಷದ ಭೀಕರ ಕಷ್ಟನಷ್ಟಗಳಿಗೆ ತುತ್ತಾದ ಬಂಗ್ಲಾದೇಶಕ್ಕೆ ಅಕಸ್ಮಾತ್ ಅಪಾರ ಚಿನ್ನ ಸಿಕ್ಕುತ್ತಿದೆ – ಅಲ್ಲಿ ಜೋರಾಗಿ ಹರಿಯುವ ಕರ್ನಾಫುಲ್ ನದಿಪಾತ್ರದಲ್ಲಿ ಆಭರಣಗಳ ಮತ್ತು ನಾಣ್ಯದರೂಪದಲ್ಲಿ ಸಿಕ್ಕುತ್ತಿದೆ – ಭಾರತ ನೌಕಾದಳದ ಕಪ್ಪೆಮಾನಷರು ಅಲ್ಲಿಗೆ ಇಳಿದು ಅಗೆದು ತೆಗೆಯುತ್ತಿದ್ದಾರೆ – ಜನವರಿವರೆಗೆ ರೂ 10ಲಕ್ಷ ಬೆಲೆಯಷ್ಟನ್ನೂ, ಮತ್ತೆ ಜುಲೈವರೆಗೆ ಎಷ್ಟೋ ಲಕ್ಷದಷ್ಟು ಬೆಲೆಯ ನಾಣ್ಯ, ಚಿನ್ನಬೆಳ್ಳಿ ಆಭರಣಗಳನ್ನೂ ತೆಗೆದು ಬಂಗ್ಲಾದೇಶಕ್ಕೆ ಕೊಡಲಾಗಿದೆ – ಪಾಕಿಸ್ತಾನ ಸೈನಿಕರು ಶರಣಾಗತಿಯಾಗುವ ಮುನ್ನ, ರಾತ್ರಿಗಟ್ಟಲೆ ನಗನಾಣ್ಯಗಳನ್ನು ಹೂಕಿದ್ದುದು ಬಂಗ್ಲಾದೇಶದ ಆಡಳಿತಗಾರರಿಗೆ ಗೊತ್ತಾಗಿ ತೆಗೆಸುತ್ತಿದ್ದಾರೆ.

●

ಸಿಮ್ಲಾ ಒಪ್ಪಂದ

ನವದೆಹಲಿ— ಜುಲೈ 3 ರಂದು ಭಾರತ ಪಾಕಿಸ್ತಾನಗಳಲ್ಲಿ ಆದ ಸಿಮ್ಲಾ ಒಪ್ಪಂದವು ಶನಿವಾರ ಮಧ್ಯರಾತ್ರಿಯಿಂದ ಜಾರಿಗೆ ಬಂದಿತು.

★

ಶಾಸಕರ ಸಂಬಳ

ಬೆಂಗಳೂರು— ಶಾಸಕರ ಸಂಬಳದ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ತರಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಶಾಸನ ಸಭೆಯಲ್ಲಿ ಭರವಸೆಯಿತ್ತರು.

●

ಉಚ್ಚಾಟನೆ

ಕಂಪಾಲಾ— ಬ್ರಿಟಿಷ್ ಏರ್‌ವೇಸ್‌ಪೋರ್ಟನ್ನು ಹೊಂದಿರುವ ಸಹಪ್ರಗಟ್ಟಲೆ ಏಷ್ಯದವರು ಯುಗಾಂಡನ್ನು 3 ತಿಂಗಳಲ್ಲಿ ಬಿಟ್ಟುಹೋಗುವಂತೆ ಅಧ್ಯಕ್ಷ ಇಡಿ ಅಮಿನ್ ಆಜ್ಞೆ ಮಾಡಿದ್ದಾರೆ

ಚೀನಾಕ್ಕೆ ಪಾಕಿಸ್ತಾನ ಕೊಟ್ಟಿರುವ ಕಾಶ್ಮೀರದ ಭಾಗ

ಮದರಾಸು— ಭಾರತ-ಪಾಕಿಸ್ತಾನಗಳ ಮಧ್ಯೆ ಕಾಶ್ಮೀರ ಸಮಸ್ಯೆ ಚರ್ಚೆಗೆ ಬಂದಾಗ, ಪಾಕಿಸ್ತಾನವು ಅಕ್ರಮಿತ ಕಾಶ್ಮೀರದಿಂದ ಚೀನಾಕ್ಕೆ ಸೇರಿಸಿರುವ ಪ್ರದೇಶದ ಮೇಲೆ ಭಾರತವು ಹಕ್ಕನ್ನು ಒಡ್ಡುವುದಾಗಿ ಪತ್ರಿಕಾ ಗೋಷ್ಠಿಯಲ್ಲಿ ರಕ್ಷಣಾ ಮಂತ್ರಿ ಶ್ರೀ ಜಗಜೀವನ್‌ರಾಂ ಹೇಳಿದರು.

★

ಗೌರ್ನರರ ಗಮನ

ತ್ರಿವೇಂಡ್ರಂ— ಕಾಲೇಜು ವಿಷಯದಲ್ಲಿನ ಉತ್ಕಟೆಯು ತೀವ್ರಗೊಂಡು ಕೊಟ್ಟಾಯಂ ಮತ್ತು ತ್ರಿಚೂರುಗಳಲ್ಲಿ ಸರಕಾರದ ಪರ ಮತ್ತು ವಿರುದ್ಧ ಭಾರಿ ಪ್ರದರ್ಶನ ಮತ್ತು ಮೆರವಣಿಗೆಗಳು ನಡೆದು, ಗೌರ್ನರರ ಗಮನ ಸೆಳೆದ್ದು, ಅವರು ಈ ವಿಷಯದಲ್ಲಿ ನೇರವಾಗಿ ಕೈಹಾಕಿ, ಕಾಲೇಜುಗಳ ಆಡಳಿತಗಾರರನ್ನು ಈ ಬಗ್ಗೆ ಚರ್ಚಿಸಲು ಸಮ್ಮೇಳನಕ್ಕೆ ಕರೆದಿದ್ದಾರೆ.

★

ಸಿಮ್ಲಾ ಒಪ್ಪಂದ ಪ್ರತಿಭಟನೆ

ಮೈಸೂರು— ಜನಸಂಘದ ಕಾರ್ಯಕರ್ತರು 50 ಮಂದಿ ಭಾನುವಾರ ಟೌನ್ ಹಾಲ್ ಮುಂದೆ ಸಿಮ್ಲಾ ಒಪ್ಪಂದದ ವಿರುದ್ಧ ಧರಣ ನಡೆಸಿದರು – ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿಮ್ಲಾ ಒಪ್ಪಂದದ ಪುನರ್ಪರಿಶೀಲನೆಯಾಗಬೇಕೆಂಬ ಠರಾವು ಮಂಜೂರಾಯಿತು.

○

ಭುಟ್ಟೋ ವಿರುದ್ಧ ಕಾರ್ಯ

ನವದೆಹಲಿ— ಭುಟ್ಟೋ ಸರಕಾರದ ವಿರುದ್ಧ ಪಾಕಿಸ್ತಾನದ ನಾಲು ವಿರೋಧ ಪಕ್ಷಗಳು ಸೆಪ್ಟಂಬರು ಮಧ್ಯದಲ್ಲಿ ಚಳವಳಿ ಹೂಡಲು ನಿರ್ಧರಿಸಿವೆ – ರಾಷ್ಟ್ರೀಯ ಅರ್ಥಿಕತೆ, ಕೈಗಾರಿಕಾ ಶಕ್ತಿ, ರಾಷ್ಟ್ರೀಯ ಗೌರವವನ್ನು ಹಾಳು ಮಾಡಲಾಗುತ್ತಿದೆ ಎಂಬುದೇ ಆರೋಪ.

ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಭವ್ಯವಾದ
ಕಟ್ಟಡದಲ್ಲಿ
9 ನೇ ಆಗಸ್ಟ್ 72 ರ ಮಧ್ಯಾಹ್ನಾತ್ಪರ 4 ಗಂಟೆಗೆ
ಹೊಟೇಲ್ ಬಿಲಾಲ್ನ್ನು
ಮೈಸೂರು ರಾಜ್ಯದ ಸಾರಿಗೆ ಮಂತ್ರಿಯವರಾದ
ಜನಾಬ್ ಅಜೀಜ್ ಸೇಟ್
ಅವರು ಕೃಪೆಯಿಟ್ಟು ಉದ್ಘಾಟಿಸಲು ಒಪ್ಪಿರುವರೆಂದು ತಿಳಿಸಲು
ಹರ್ಷವಾಗುತ್ತದೆ
ಎಂ. ಅಬ್ದುಲ್ ರಜಾಕ್, ಮಾಲೀಕರು

ಕ್ರೂದಲಿಗೂ ಒಂದು ತೆರಿಗೆ

ಫಿಲಿಫೈನ್ಸ್ ದ್ವೀಪದ ಮಲೈಬಲೈ ಪಟ್ಟಣದ ನಗರ ಸಭೆಯು ಏಪ್ರಿಲ್ 72 ರಂದು ಉದ್ದ ಕೂದಲಿನ ಗಂಡಸರ ಮೇಲೆ 5 ' ಪೈಸೊ " ಗಳನ್ನು (0.78 ಅಮೇರಿಕಾ ಡಾಲರಿಗೆ ಸಮ) ತೆರಿಗೆಯನ್ನು ವಿಧಿಸಿದೆ : ಈ ತೆರಿಗೆಯನ್ನು ಸಲ್ಲಿಸದೆ ಇರುವವರಿಗೆ 2 ದಿನಸೆರೆಮನೆ ವಾಸ ಮತ್ತು 10 ಪೆಸೋ ಜುಲ್ಮಾನೆ ವಿಧಿಸಲಾಗುತ್ತದೆ.

★

ನುಂಗುವುದರಲ್ಲೂ ಒಂದು ದಾಖಲೆ

ಇಂಗ್ಲೆಂಡಿನ ಸ್ಕಾರ್‌ಬೆರೋ ಪಟ್ಟಣದ ಮಹಾಸೌರ ಪೀಟರ್ ಜಾಕೋಸೆಲ್ಲಿಯು ಸ್ಥಳಕಾಯದ ವ್ಯಕ್ತಿ : ಆತನ ತೂಕ 127 ಕಿಲೋಗ್ರಾಂ. ಇತ್ತೀಚೆಗೆ ಆತನು 48 ನಿಮಿಷಗಳಲ್ಲಿ 500 ಮೃದ್ವಂಗಿ ಸಿಂಪಿಗಳನ್ನು (ಆಯಸ್ಟರ್ಸ್) ಗಳನ್ನು ನುಂಗಿದನು. ತನ್ನ ಅಧಿಕಾರಾವಧಿಯು ಮೇ ತಿಂಗಳಲ್ಲಿ ಮುಗಿಯುವುದಕ್ಕೆ ಮೊದಲೇ ತನ್ನ ಪಟ್ಟಣಕೊಂದು ದಾಖಲೆಯ ಸ್ಥಾನವನ್ನು ನಿಕ್ಕಿಮಾಡುವುದಕ್ಕಾಗಿಯೇ ತಾನು ಹಾಗಿ ನುಂಗಿದುದಾಗಿ ಅವನು ತಿಳಿಸಿದನು.

★

ದಿವ್ಯವಾಣಿ

ದೇವರು ಮನುಷ್ಯನಾಗಿದ್ದಾನೆ ; ಮನುಷ್ಯನು ಪುನಃ ದೇವರಾಗುತ್ತಾನೆ ; ನೀನು ನಿನ್ನನ್ನು ನಂಬುವವರೆಗೆ ದೇವರನ್ನು ನಂಬಲಾರೆ. — ಸ್ವಾಮಿ ವಿವೇಕಾನಂದರು

Quality Printing Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

Help The Gorakshana

— Humanitarian Propoganda Monthly ....

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

ವುಡ್‌ಲ್ಯಾಂಡ್ಸ್ 4-8-72ರಿಂದ ಅಮೋಘ **14ನೇವಾರ**

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕಣ್ತೆರದು ನೋಡು

ಅಪೆರಾ 2 ನೇ ವಾರ

ಫಿಲಂ ಲ್ಯಾಂಡ್‌ರವರ ಮಹೋನ್ನತ ಹಿಂದಿ ಚಿತ್ರ

ಬನ್ ಪೂಲ್

ಪಾತ್ರ : ಜಿತೇಂದ್ರ, ಬಬಿತ

ದಿಗ್ದರ್ಶನ : ವಿಜಯಭಟ್ ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 3 ಪ್ರದರ್ಶನಗಳು

' ಮಾನವನು ಕೇಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

ಆನೆ - ಹುಡುಗ



Protect the Cow

Contribute Liberally to the National Defence Fund